1064 ಶ್ರೀ ಗೋಪಾಲ ಭಂಡಾರಿ ಹೆಚ್ (ಕಾರ್ಕಳ) : ಮಾನ್ಯ ಪ್ರವಾಸೋದ್ಯಮ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉಡುಪಿ ಜಿಲ್ಲೆಗೆ ವಿಮಾನ ನಿಲ್ದಾಣ ಮಾಡಲು ಸರ್ಕಾರ ಉದ್ದೇಶಿಸಿದೆಯೇ;

ಆ) ಹಾಗಿದ್ದಲ್ಲಿ ವಿಮಾನ ನಿಲ್ದಾಣ ನಿರ್ಮಾಣ ಮಾಡಲು ಯಾವ ಯಾವ ತರಹದ ಪ್ರಸ್ತಾವನೆ ಸರ್ಕಾರ ಮುಂದೆ ಇದೆ;

ಇ) ಈ ಬಗ್ಗೆ ಸ್ಥಳ ಆಯ್ಕೆ ಮಾಡುವ ಜವಾಬ್ದಾರಿ ಯಾರಿಗೆ ವಹಿಸಲಾಗಿದೆ;

ಈ) ವಿಮಾನ ನಿಲ್ದಾಣ ಮಾಡುವುದಿದ್ದರೆ ಎಂದಿನಿಂದ ಕಾರ್ಯಾರಂಭ ಮಾಡಲಾಗುವುದು?

ಪ್ರವಾಸೋದ್ಯಮ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು :

ಅ) ಉಡುಪಿ ಜಿಲ್ಲೆಗೆ ವಿಮಾನ ಇಳಿದಾಣ (Airstrip) ಮಾಡಲು ಸರ್ಕಾರ ಉದ್ದೇಶಿಸಿದೆ.

ಆ) ಉದ್ದೇಶಿತ ಉಡುಪಿ ವಿಮಾನ ಇಳಿದಾಣವನ್ನು 20 ಆಸನಗಳ ಏರ್‌ಕ್ರಾಫ್ಟ್ ಅಥವಾ ATR-72 ಸಾಮರ್ಥ್ಯದ ಏರ್‌ಕ್ರಾಫ್ಟ್ ಆಪರೇಷನ್‌ಗೆ ವಿನ್ಯಾಸಿಸುವ ಬಗ್ಗೆ ಪರಿಶೀಲಿಸಲಾಗುತ್ತಿದೆ.

ಇ) ಉಡುಪಿ ಜಿಲ್ಲಾಡಳಿತ ಮತ್ತು ಕರ್ನಾಟಕ ಗೃಹ ನಿರ್ಮಾಣ ಮಂಡಳಿಗೆ ವಹಿಸಲಾಗಿದೆ.

ಈ) ಉಡುಪಿಯಲ್ಲಿ ವಿಮಾನ ಇಳಿದಾಣ ನಿರ್ಮಿಸಲು ಸ್ಥಳ ಆಯ್ಕೆ ಕಾರ್ಯವು ಪ್ರಗತಿಯಲ್ಲಿರುವುದು.

865 ಶ್ರೀ ರುದ್ರೇಶಗೌಡ ವೈ.ಎನ್. (ಬೇಲೂರು) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಅರಸೀಕೆರೆ ತಾಲ್ಲೂಕಿನ ಜಾವಗಲ್ ಹೋಬಳಿಯಲ್ಲಿ ಪೊಲೀಸ್ ಸ್ಟೇಷನ್ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಪೊಲೀಸ್ ಸ್ಟೇಷನ್ ಮಂಜೂರು ಮಾಡಲು ಸರ್ಕಾರ ಏನು ಕ್ರಮ ತೆಗೆದು ಕೊಂಡಿದೆ?

ಶ್ರೀ ಡಾ: ವಿ.ಎಸ್.ಆಚಾರ್ಯ (ಗೃಹ ಸಚಿವರು) :

ಅ) ಅರಸೀಕೆರೆ ತಾಲ್ಲೂಕಿನ ಜಾವಗಲ್ ಹೋಬಳಿಯಲ್ಲಿ ಪೊಲೀಸ್ ಹೊರ ಠಾಣೆ ಈಗಾಗಲೇ ಕಾರ್ಯನಿರ್ವಹಿಸುತ್ತಿದೆ.

Javagal Police Outpost in Javagal Hobli, Arasikere Taluk is already functioning.

ಆ) 2009ನೇ ಸಾಲಿನಲ್ಲಿ ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರವರು ರಾಜ್ಯದ ವಿವಿಧ ಸ್ಥಳಗಳಲ್ಲಿ ಪೊಲೀಸ್ ಠಾಣೆಗಳನ್ನು ಮಂಜೂರು ಮಾಡಲು ಕಳುಹಿಸಿರುವ ಕ್ರೋಢೀಕೃತ ಪ್ರಸ್ತಾವನೆಯಲ್ಲಿ ಸದರಿ ಪೊಲೀಸ್ ಉಪ ಠಾಣೆಯನ್ನು ಮೇಲ್ದರ್ಜೆಗೇರಿಸಿ ಪೂರ್ಣ ಪ್ರಮಾಣದ ಪೊಲೀಸ್ ಠಾಣೆಯನ್ನಾಗಿ ಸೃಜಿಸುವ ಪ್ರಸ್ತಾವನೆ ಸೇರಿರುತ್ತದೆ. ಹಣಕಾಸಿನ ಲಭ್ಯತೆಗೆ ಅನುಗುಣವಾಗಿ ಸದರಿ ಪ್ರಸ್ತಾವನೆಯನ್ನು ಪರಿಗಣಿಸಲಾಗುವುದು.

Proposal to upgrade this Police Outpost into a fullfledged Police Station during 2009 is included in the consolidated proposal sent by the DG & IGP for sanctioning new Police Stations at various places in the State. This proposal with be considered depending on the availability of funds.

917 ಶ್ರೀ ಕೃಷ್ಣಮೂರ್ತಿ ಕೆ.ಎಂ.(ಕಡೂರು) : ಮಾನ್ಯ ಪ್ರವಾಸೋದ್ಯಮ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಡೂರು ಪಟ್ಟಣದ ಮೂಲಕ ಪ್ರತಿನಿತ್ಯ ಎಷ್ಟು ರೈಲುಗಳು ಓಡಾಡುತ್ತಿವೆ;

ಆ) ರೈಲ್ವೆ ಗೇಟ್ ಮೂಲಕ ಓಡಾಡಲು ಸಾರ್ವಜನಿಕರಿಗೆ ತುಂಬಾ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಹಾಗಿದ್ದಲ್ಲಿ, ಕಡೂರು ಪಟ್ಟಣದ ರೈಲ್ವೆಗೇಟ್ ಬಳಿ ಮೇಲು ಸೇತುವೆ ನಿರ್ಮಾಣಕ್ಕಾಗಿ ಸರ್ಕಾರ ಕ್ರಮ ಕೈಗೊಳ್ಳುವುದೇ?

ಪ್ರವಾಸೋದ್ಯಮ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು :

ಅ) ಪ್ರತಿನಿತ್ಯ 42 ಪ್ರಯಾಣಿಕರನ್ನು ಸಾಗಿಸುವ ರೈಲುಗಳು. 12 ಸರಕು ಸಾಗಾಣಿಕೆ ರೈಲುಗಳು ಓಡಾಡುತ್ತಿವೆ.

ಆ) ಇತ್ತೀಚೆಗಷ್ಟೆ ಗಮನಕ್ಕೆ ಬಂದಿದೆ.

ಇ) ಸದರಿ ಪಟ್ಟಣದ ರೈಲ್ವೆ ಗೇಟ್ ಬಳಿ ಮೇಲು ಸೇತುವೆ ನಿರ್ಮಿಸಲು ರೈಲ್ವೆ ಇಲಾಖೆಯ ನಿಯಮಾವಳಿಯ ಪ್ರಕಾರ ಟ್ರೈನ್‌ವೆಹಿಕಲ್ ಯುನಿಟ್‌ಗಳು ಒಂದು ಲಕ್ಷಕ್ಕಿಂತ ಕಡಿಮೆ ಇರುವುದರಿಂದ ಈ ಗೇಟ್ ಬಳಿ ಸೇತುವೆಯನ್ನು ಈಗಿರುವ ವೆಚ್ಚ ಹಂಚಿಕೆಯಡಿ (ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರ) ನಿರ್ಮಿಸಲು ಅವಕಾಶವಿರುವುದಿಲ್ಲ.

ಕ-11ಕ